Mr. SPEAKER.—Does not the Hon'ble Member think that these supplementary questions are beyond the scope of this question ?

Sri M. GOVINDA REDDY.—Sir, my point is to see that Government gives more encouragement for breeding of Amritmahal cattle. it being an important factor in the national wealth of the country. I am therefore putting these questions.

Are Government not convinced that the amount that they are spending on the breeding of this species of cattle is very little ?

Sri T. MARIAPPA.—No. We are spending adequate sums commensurate with the returns.

Sri M. GOVINDA REDDY.—Are Government not convinced that in the interests of agricultural economy of the State, they should encourage breeding and increase the number of these cattle ?

Sri T. MARIAPPA.—We are trying our best to upgrade and increase the number.

Sri M. GOVINDA REDDY.—Have Government any plans to improve the farms where these cattle are bred and increase their number ?

Sri T. MARIAPPA.—We are prepared to improve by spending more sums. But the spending must be commensurate with the results we get.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು (ಮೈಸೂರು ಜಿಲ್ಲೆ).—ಸಂಸ್ಥಾನದಲ್ಲಿರುವ ಅಮೃತಮಹಲ್ ದನಗಳ ಸಂಖ್ಯೆ 3,975; ಅದರಲ್ಲಿ 1,824 ಸರ್ಕಾರಿ ಫಾರಂಗಳಲ್ಲಿಯೂ 891 ಸೇರ್ವೆಗಾರರ ಹತ್ತಿರವೂ ಇವೆ ಎಂದು ಉತ್ತರದಲ್ಲಿ ತಿಳಿಸಿದೆ. ಬಾಕಿ ದನಗಳು ಎಲ್ಲಿವೆ ?

ಶ್ರೀ ಟಿ. ಮರಿಯಪ್ಪನವರು—That question has already been answered. ಏಡೆಡ್ ಬ್ರೀಡರ್ಸ್ ಹತ್ತಿರ ಇರುತ್ತವೆಂದು ಹೇಳಿದ್ದೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—44,335 ಎಕರೆ ಜಮೀನು ಸಂಸ್ಥಾನದಲ್ಲಿರುವ ಎಲ್ಲ ಅಮೃತ ಮಹಲ್ ದನಗಳಿಗೆಂತಲೋ ಅಥವಾ ಸರ್ಕಾರಿ ದನಗಳಿಗೆ ಮಾತ್ರ ಎಂತಲೋ ?

Sri T. MARIAPPA.— The question and the answer printed are both clear.

Sri H. M. CHANNABASAPPA.—Am I to understand that the area is exclusively for these cattle.

Mr. SPEAKER.—The question is like that and the answer also is likewise.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—57,118 ರೂಪಾಯಿ ಬರಿಯ ದನಗಳ ಮೇಲಾಗುವ ಖರ್ಚೋ ಅಥವಾ ಅದರಲ್ಲಿ ಓವರ್ ಹೆಡ್ ಖರ್ಚೂ ಸೇರಿದೆಯೊ?

ಶ್ರೀ ಟಿ. ಮರಿಯಪ್ಪನವರು.—Cattle Breeding Station, Economic Farms, ಸೇರ್ವೆಗಾರರಲ್ಲಿರುವುದು—ಇವುಗಳ ಖರ್ಚು ಸೇರಿದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—Overhead ಖರ್ಚು ಲೆಕ್ಕಾಚಾರ ಹಾಕಿದರೆ ಎಷ್ಟಾಗುತ್ತದೆ?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಕೆ. ನುಬ್ಬರಾಯರು (ಬೆಂಗಳೂರು ಜಿಲ್ಲೆ).—ಒಟ್ಟು 3975 ದನಗಳಿವೆಯೆಂದು ತಿಳಿಸಿದೆ, ಅವುಗಳೆಲ್ಲ ಪ್ರಾಯದವೋ ಅಥವಾ ಆ ಸಂಖ್ಯೆಯಲ್ಲಿ ಮುದಿ ದನಗಳೂ ಸೇರಿವೆಯೊ?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಅವ್ಯತಮಹಲ್ ದನಗಳಿಂದ ಬರತಕ್ಕ ಉತ್ಪತ್ತಿ 73,775 ರೂಪಾಯಿ ಎಂದು ಉತ್ತರದಲ್ಲಿದೆ, ಇದರಲ್ಲಿ ರಾಸುಗಳನ್ನು ಮಾರಿದ್ದೆಷ್ಟು, ಬೀಜದ ಹೋರಿಗಳನ್ನು ಮಾರಿ ಬಂದದ್ದೆಷ್ಟು ?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು.—ಈಗ ಕೇಳಿದವರಿಗೆ ಬೀಜದ ಹೋರಿಗಳನ್ನು ಕೊಡುತ್ತಿದ್ದಾರೆಯೆ ?

ಶ್ರೀ ಟಿ. ಮರಿಯಪ್ಪನವರು.—ಕೊಡುತ್ತಿದ್ದೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಅನೇಕ ಸಂದರ್ಭಗಳಲ್ಲಿ ಕೇಳಿದರೂ ಕೊಡುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಮರಿಯಪ್ಪನವರು.—ಇದ್ದರೆ ಕೊಡದೇ ಇರುವುದಿಲ್ಲ. ವರ್ಷವರ್ಷವೂ ಕರುಗಳು ತಯಾರಾದ ಹಾಗೆ ಕೇಳಿದವರಿಗೆ ಕೊಡುತ್ತಿದ್ದೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಇದುವರೆಗೆ ಒಟ್ಟು ಎಷ್ಟು ಹೋರಿಗಳಾಗಿವೆ ?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು.—ಹೋರಿಗಳು ಸಾಕಾದಷ್ಟಿಲ್ಲ. There is acute shortage of bulls.... .....

Sri T. MARIAPPA.—In fact that is the reason why we are augmenting the resources for cattle breeding.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಈ ತಳಿಗಳನ್ನು ಅಭಿವೃದ್ಧಿ ಮಾಡುವುದು ಸಾಕೆಂದು ಸರ್ಕಾರದವರ ಅಭಿಪ್ರಾಯವೆ ?

ಶ್ರೀ ಟಿ. ಮರಿಯಪ್ಪನವರು.—ಇನ್ನೂ ಅಭಿವೃದ್ಧಿ ಮಾಡಿ ಸಂಖ್ಯೆಯನ್ನು ಹೆಚ್ಚಿಸಬೇಕೆಂಬ ಉದ್ದೇಶವಿದೆ.

Working of Dairy Farms in the State.

*Q.—20. **Sri B. N. BORANNA GOWDA** (Hassan District—General).—Will the Government be pleased to state:—

(a) the number of dairy farms in the State that get aid from the Government (districtwar details to be furnished) ;

(b) the quantity of milk that is made available to the public every day from these dairies ;

(c) whether any complaint has reached Government that the amount drawn for dairy farms has been misappropriated :

(d) whether the practice of getting reports from the District Veterinary Officer regarding the working of these dairy farms is in vogue in Government?

A.—**Sri T. MARIAPPA** (Home Minister).—

(a).

District		Number.
Shimoga	...	1
Kolar	...	1
Hassan	...	4
Mysore	...	1
Chitaldrug	...	3
Mandya	...	1
		11

(b) About 305 seers.
(c) No.
(d) Yes.

Agreement between the Government of Madras and the Government of Mysore to share the waters of Cauvery River.

*Q.—56 **Sri M. V. KRISHNAPPA** (Kolar District—General).—Will the Government be pleased to state:—

(a) whether there is an agreement entered into between them and the Government of Madras to share the waters of Cauvery River;

(b) when the agreement was entered into and the conditions of the agreement?

A.—**Sri T. MARIAPPA** (Home Minister).—(a) Yes,

(b) On 18th February 1924, supplemented by another agreement on 17th June 1929. A copy of the agreement is placed on the table.*

ಶ್ರೀ ಎಂ. ವಿ. ಕೃಷ್ಣಪ್ಪನವರು.—ಮದರಾಸು ಸರ್ಕಾರದೊಡನೆ ಒಪ್ಪಂದಮಾಡಿಕೊಂಡಿರುವುದಾಗಿ ತಿಳಿಸಿದೆ. ಹೀಗೆ ಒಪ್ಪಂದ ಮಾಡಿಕೊಳ್ಳಬೇಕಾದ ಪ್ರಮೇಯವೇನು ?

ಶ್ರೀ ಟಿ. ಮರಿಯಪ್ಪನವರು.—ಕಾವೇರಿ ನದಿಯ ನೀರು ಮದರಾಸು ಪ್ರಾಂತಕ್ಕೂ ಹರಿಯುತ್ತದೆ, ಅದರಿಂದ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಹೊಳೆಯ ನೀರಿಗೆ ದೊಣ್ಣೆನಾಯಕನ ಅಪ್ಪಣೆಯೆ ? (ನಗು !) ನಮಗೆ ಬೇಕಾದಷ್ಟು ನೀರು ದೊರೆಯದೆ ತೊಂದರೆಯಾಗುವುದಿಲ್ಲವೆ ?

ಶ್ರೀ ಟಿ. ಮರಿಯಪ್ಪನವರು.—ಎಲ್ಲಾ ವಿಷಯಗಳನ್ನೂ ಚರ್ಚಿಸಿ ಪ್ರವೀಣರ ಅಭಿಪ್ರಾಯಗಳನ್ನೂ ತೆಗೆದುಕೊಂಡು ವಿಧಿಯಲ್ಲದೆ 1924ನೆಯ ಇಸವಿಯಲ್ಲಿ ಒಪ್ಪಂದವಾಗಿದೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಮಲೆನಾಡಿನಲ್ಲಿ ಮಳೆ ಕಡಿಮೆಯಾದಾಗ ನಮಗೆ ಹೆಚ್ಚು ನೀರು ಬೇಕಾಗುತ್ತದೆ, ಅದಕ್ಕೆ ಅವಕಾಶವಿರಬೇಕೆಂದು ಕೇಳಿದ್ದೀರಾ?

ಶ್ರೀ ಟಿ. ಮರಿಯಪ್ಪನವರು.—ನಮಗೆ ಈಗಾಗಲೇ ಕಷ್ಟಬಂದಿದೆ. ಈ ವಿಚಾರದಲ್ಲೂ ಪ್ರಯತ್ನ ಮಾಡುತ್ತಿದ್ದೇವೆ.

Sri S. RANGARAMAIAH.—Sir, on a point of information. It is stated that a copy of the agreement is placed on the table. ಅದು ನಮಗೆ ಸೀರಿಲ್ಲ, ಎಲ್ಲಿದೆ ?

Mr. SPEAKER.—The Honourable Member can see it. It is on the Secretary's table.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಈ ಒಪ್ಪಂದ ಮಾಡಿಕೊಂಡಾಗ ಪ್ರಾಂತಗಳು ಬ್ರಿಟಿಷ್‌ನವರ ಅಡಳಿತದಲ್ಲಿದ್ದವು. ಆದುದರಿಂದ ಮೈಸೂರು ಸರ್ಕಾರದವರ ಇಷ್ಟದಂತೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲವೆಂಬುದು ಗೊತ್ತಿದೆಯೆ ?

Sri T. MARIAPPA.—I am not prepared to enter into *post-mortem* examination of things that took place.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಈಗಲಾದರೂ ನಮ್ಮ ಅವಶ್ಯಕತೆಗಳನ್ನು ನೋಡಿಕೊಂಡು ಅದಕ್ಕೆ ತಕ್ಕಂತೆ ಇನ್ನೂ ಹೆಚ್ಚು ನೀರನ್ನು ನಿಲ್ಲಿಸಿಕೊಳ್ಳಲು ಅವಕಾಶ ಮಾಡುತ್ತೀರಾ ?

ಶ್ರೀ ಟಿ. ಮರಿಯಪ್ಪನವರು.—ಮೈಸೂರಿಗೆ ಎಷ್ಟು ಅನುಕೂಲವಾಗಬೇಕೋ ಅಷ್ಟನ್ನೂ ಮಾಡಬೇಕೆಂದು ಸರ್ಕಾರದವರು ಆಲೋಚನೆ ಮಾಡುತ್ತಿದ್ದಾರೆ. ಇದೆಲ್ಲವನ್ನೂ ಕೇಂದ್ರ ಸರ್ಕಾರದೊಡನೆ ಆಲೋಚನೆ ಮಾಡಬೇಕೆಂಬ ಉದ್ದೇಶವಿದೆ.

Sri A. BHEEMAPPA NAIK (Chitaldrug District—General).—Was not the decision contained in the agreement between the Madras Government and our Government against the recommendations of the Committee? And is it not to the disadvantage of Mysore?

Sri T. MARIAPPA.—Sir, willy-nilly, we are bound by the agreement. It is much better we take it up afresh and have it decided so that it may become more advantageous to Mysore.

ಜನಾಬ್ ಜೆ. ಮಹಮದ್ ಇಮಾಂರವರು (ಚಿತ್ರದುರ್ಗ ಮತ್ತು ತುಮಕೂರು—ಮುಸ್ಲಿಂ).—ಈಗ ಆಗಿರುವ ಒಪ್ಪಂದವನ್ನು ಬದಲಾಯಿಸಿ ಪುನಃ ಹೊಸ

* Placed in the Legislative Assembly Library.